Akashvani: Bangalore
National Bulletin In Kannada
30.01.2026: 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

********

ಮುಖ್ಯಾಂಶಗಳು:

1. ಸುರಕ್ಷಿತ ಕೃತಕಬುದ್ಧಿಮತ್ತೆ ಪರಿಸರ ವ್ಯವಸ್ಥೆಯ ನಿರ್ಮಾಣದ ಅಗತ್ಯವಿದೆ - ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ
2. ಜಾಗತಿಕ ರಾಜಕೀಯ ಬಿಕ್ಕಟ್ಟು, ಆರ್ಥಿಕ ಪ್ರಕ್ಷುಬ್ಧತೆಯ ನಡುವೆಯೂ ಬೆಳವಣಿಗೆ ಹಾದಿಯಲ್ಲಿ ಭಾರತದ ಆರ್ಥಿಕತೆ - ಸಚಿವೆ ನಿರ್ಮಲಾ ಸೀತಾರಾಮನ್
3. ಉದ್ಯೋಗ ಮೇಳಗಳಿಂದ ಕಳೆದ ಒಂದು ವರ್ಷದಲ್ಲಿ ೨ ಕೋಟಿ ೨೨ ಲಕ್ಷ ಜನರಿಗೆ ಉದ್ಯೋಗ - ಸಚಿವ ಡಾ. ಮನ್ಸುಖ್ ಮಾಂಡವೀಯ
4. ಡಬ್ಲೂಪಿಎಲ್ ಟಿ-೨೦ ಕ್ರಿಕೆಟ್; ಯುಪಿ ವಾರಿಯರ್ಸ್ ವಿರುದ್ಧ ಆರ್‌ಸಿಬಿ ತಂಡಕ್ಕೆ ೮ ವಿಕೆಟ್‌ಗಳ ಭರ್ಜರಿ ಜಯ

***********

ಪಾರದರ್ಶಕ, ನಿಷ್ಪಕ್ಷಪಾತ ಮತ್ತು ಸುರಕ್ಷಿತವಾದ ಕೃತಕಬುದ್ಧಿಮತ್ತೆ ಪರಿಸರ ವ್ಯವಸ್ಥೆಯ ನಿರ್ಮಾಣದ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಮುಂಬರುವ ಎಐ ಇಂಪ್ಯಾಕ್ಟ್ ಶೃಂಗಸಭೆ ಕುರಿತು ನವದೆಹಲಿಯ ತಮ್ಮ ನಿವಾಸದಲ್ಲಿ ಎಐ ಕ್ಷೇತ್ರದಲ್ಲಿ ಕೆಲಸ ಮಾಡುವ ಕಂಪನಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ತಜ್ಞರೊಂದಿಗೆ ಸಂವಾದ ನಡೆಸಿದ ಅವರು, ಕೃತಕಬುದ್ಧಿಮತ್ತೆಯ ನೈಜ ಬಳಕೆ ಬಗ್ಗೆ ಯಾವುದೇ ರಾಜಿಮಾಡಿಕೊಳ್ಳಬಾರದು ಎಂದು ಹೇಳಿದರು. ಹೊಸ ಅವಕಾಶಗಳನ್ನು ಅನ್ವೇಷಿಸಲು ಮತ್ತು ಬೆಳವಣಿಗೆಯ ಹಾದಿಯಲ್ಲಿ ಮುನ್ನಡೆಯಲು ಮುಂಬರುವ ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಬಳಸಿಕೊಳ್ಳಬೇಕು. ಏಕೀಕೃತ ಪಾವತಿ ಇಂಟರ್‌ಫೇಸ್ - ಯುಪಿಐ ಮೂಲಕ ಭಾರತ ತನ್ನ ತಾಂತ್ರಿಕ ಪರಾಕ್ರಮ ಪ್ರದರ್ಶಿಸಿದೆ. ಎಐ ಕ್ಷೇತ್ರದಲ್ಲೂ ಇದನ್ನು ಪುನರಾವರ್ತಿಸಬಹುದು ಎಂದರು. ಫೆಬ್ರವರಿಯಲ್ಲಿ ನಡೆಯಲಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯ ಹಿನ್ನೆಲೆಯಲ್ಲಿ ಈ ಸಂವಾದ ನಡೆಯಿತು. ಸಭೆಯಲ್ಲಿ

ವಿಪ್ರೋ, ಎಚ್‌ಸಿಎಲ್ ಟೆಕ್ ಸೇರಿದಂತೆ ಅನೇಕ ಕಂಪನಿಗಳ ಸಿಇಒಗಳು, ಐಐಐಟಿ ಹೈದ್ರಾಬಾದ್, ಐಐಟಿ ಮದ್ರಾಸ್ ಮತ್ತು ಐಐಟಿ ಬಾಂಬೆಯ ತಜ್ಞರು ಭಾಗವಹಿಸಿದ್ದರು.

***********

ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಆರ್ಥಿಕ ಪ್ರಕ್ಷುಬ್ಧತೆಯ ನಡುವೆಯೂ ಆರ್ಥಿಕತೆಯಲ್ಲಿ ಭಾರತ ಸ್ಥಿರವಾಗಿ ನಿಂತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಲೋಕಸಭೆಯಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆಯು ಜಾಗತಿಕ ಅನಿಶ್ಚಿತತೆಗಳ ನಡುವೆಯೂ ಭಾರತದ ಆರ್ಥಿಕತೆಯು ಬಲವಾದ ಆವೇಗವನ್ನು ಕಾಯ್ದುಕೊಂಡಿದೆ. ಮೊದಲ ಮುಂಗಡ ಅಂದಾಜುಗಳ ಪ್ರಕಾರ ೨೦೨೫-೨೬ರ ನೈಜ ಜಿಡಿಪಿ ಬೆಳವಣಿಗೆ ಶೇಕಡ ೭.೪ರಷ್ಟು ಇರಲಿವೆ ಎಂದು ಉಲ್ಲೇಖಿಸಿದ್ದಾರೆ. ಈ ಬೆಳವಣಿಗೆಯು ಸತತ ನಾಲ್ಕನೇ ವರ್ಷವೂ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಭಾರತದ ಸ್ಥಾನವನ್ನು ಪುನರುಚ್ಚರಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದ ಸ್ಥೂಲ ಆರ್ಥಿಕ ಮೂಲಭೂತ ಅಂಶಗಳು ಎಂದಿಗಿಂತಲೂ ಬಲವಾಗಿವೆ ಎಂದು ಅವರು ಹೇಳಿದರು. ಭಾರತವನ್ನು ಬೆಳವಣಿಗೆಯ ಪಥದಲ್ಲಿ ಇರಿಸಲು ಕೇಂದ್ರ ಸರ್ಕಾರ ಜಾಗತಿಕ ಅಡತಡೆಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ. ಸಂಭಾವ್ಯ ಜಿಡಿಪಿ ಬೆಳವಣಿಗೆಯು ಶೇಕಡ ೭ಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

***********

ಜಾಗತಿಕ ಸವಾಲುಗಳ ನಡುವೆಯೂ ಭಾರತ ವೇಗವಾಗಿ ಚಲಿಸುತ್ತಿರುವ ಸುಧಾರಣಾ ಎಕ್ಸ್‌ಪ್ರೆಸ್ ಹಾದಿಯಲ್ಲಿದೆ ಎಂಬುದನ್ನು ಆರ್ಥಿಕ ಸಮೀಕ್ಷೆ ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ. ಸಂಸತ್ತಿನಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆಯ ಕುರಿತು ಸಮಾಜಿಕ ಜಾಲತಾಣದಲ್ಲಿ ಅವರು, ಈ ಸಮೀಕ್ಷೆಯು ಭಾರತದ ಆರ್ಥಿಕ ಬಲ ಮತ್ತು ಬೆಳವಣಿಗೆ, ನಾವೀನ್ಯತೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಹೆಚ್ಚಿಸಲು ಸರ್ಕಾರ ನಿರಂತರ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ನಿರಂತರ ಸುಧಾರಣೆಯು ಆರ್ಥಿಕತೆಯನ್ನು ಬಲಪಡಿಸಲು ಮತ್ತು ಹೂಡಿಕೆದಾರರು ಹಾಗೂ ನಾಗರಿಕರಲ್ಲಿ ವಿಶ್ವಾಸ ಬೆಳೆಸಲು ಸಹಾಯ ಮಾಡಿವೆ. ರೈತರು,

ಎಂಎಸ್‌ಎಂಇಗಳು, ಯುವಕರಿಗೆ ಉದ್ಯೋಗ ಮತ್ತು ಸಾಮಾಜಿಕ ಕಲ್ಯಾಣದ ಮೇಲೆ ಕೇಂದ್ರೀಕರಿಸಿದ ಸಮಗ್ರ ಆರ್ಥಿಕತೆಯ ಮಹತ್ವವನ್ನು ಈ ಆರ್ಥಿಕ ಸಮೀಕ್ಷೆ ಒತ್ತಿ ಹೇಳುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

***********

ದೇಶದಲ್ಲಿ ಇದುವರೆಗೆ ೧೮ ಆವೃತ್ತಿಯ ಉದ್ಯೋಗ ಮೇಳವನ್ನು ಸರ್ಕಾರ ಆಯೋಜಿಸಿದ್ದು, ಇದರಲ್ಲಿ ೧೧ ಲಕ್ಷದ ೩೯ ಸಾವಿರ ಜನರಿಗೆ ಕೇಂದ್ರ ಸರ್ಕಾರಿ ಉದ್ಯೋಗಗಳನ್ನು ನೀಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವಿಯ ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿ ನಿನ್ನೆ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ೨೦೨೨ರ ಅಕ್ಟೋಬರ್‌ನಲ್ಲಿ ಉದ್ಯೋಗ ಮೇಳವನ್ನು ಪ್ರಾರಂಭಿಸಲಾಗಿದ್ದು, ಕಳೆದ ಒಂದು ವರ್ಷದಲ್ಲಿ ದೇಶಾದ್ಯಂತ ಒಟ್ಟು ೧೮ ಸಾವಿರ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದ್ದು, ಇದರಲ್ಲಿ ಎರಡು ಕೋಟಿ ೨೨ ಲಕ್ಷ ಜನರಿಗೆ ಉದ್ಯೋಗಗಳನ್ನು ಒದಗಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ರಾಷ್ಟ್ರೀಯ ವೃತ್ತಿ ಸೇವಾ ಪೋರ್ಟಲ್ ಅನ್ನು ಇ-ಮೈಗ್ರೇಟ್ ಪೋರ್ಟಲ್, ಮೇರಾ ಯುವ ಭಾರತ್ ಮತ್ತು ಕೌಶಲ್ಯ ಅಭಿವೃದ್ಧಿ ಪೋರ್ಟಲ್‌ನೊಂದಿಗೆ ಸಂಯೋಜಿಸಲಾಗಿದೆ. ಇದು ಖಾಸಗಿ ಮತ್ತು ಸರ್ಕಾರಿ ವಲಯಗಳ ಉದ್ಯೋಗಗಳು ಸೇರಿದಂತೆ ವೃತ್ತಿ ಸಂಬಂಧಿತ ಸೇವೆಗಳನ್ನು ಒದಗಿಸಲು ಪರಿಹಾರವಾಗಿದೆ. ಇದರಿಂದಾಗಿ ಉದ್ಯೋಗಾವಕಾಶಗಳನ್ನು ಒಂದೇ ಸ್ಥಳದಲ್ಲಿ ಹುಡುಕಬಹುದಾಗಿದೆ ಎಂದು ಸಚಿವ ಡಾ. ಮನ್ಸುಖ್ ಮಾಂಡವಿಯಾ ತಿಳಿಸಿದ್ದಾರೆ.

***********

ಮುಂಬೈ - ಅಹಮದಾಬಾದ್ ಬುಲೆಟ್ ರೈಲು ಯೋಜನೆಗಾಗಿ ಅಹಮದಾಬಾದ್ ಜಿಲ್ಲೆಯಲ್ಲಿ ಮೆಟ್ರೋ ಸುರಂಗದ ಮೇಲೆ ನೂರು ಮೀಟರ್ ಉದ್ದದ ಮೇಕ್ ಇನ್ ಇಂಡಿಯಾ ಉಕ್ಕಿನ ಸೇತುವೆ ನಿರ್ಮಾಣವನ್ನು ಭಾರತೀಯ ರೈಲ್ವೆ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಗುಜರಾತ್‌ನಲ್ಲಿ ಯೋಜಿಸಲಾಗಿರುವ ಒಟ್ಟು ೧೭ ಉಕ್ಕಿನ ಸೇತುವೆಗಳ ಪೈಕಿ ಇದುವರೆಗೆ ೧೩ ಉಕ್ಕಿನ ಸೇತುವೆಗಳ ನಿರ್ಮಾಣ ಪೂರ್ಣಗೊಂಡಿವೆ. ಇನ್ನೊಂದೆಡೆ ಆಗ್ನೇಯ ಮಧ್ಯ ರೈಲ್ವೆ ಅಡಿ ೪೨೭ ಕೋಟಿ ರೂಪಾಯಿ ವೆಚ್ಚದಲ್ಲಿ ೨೭ ಕಿಲೋಮೀಟರ್ ಉದ್ದದ ಬೈಕುಂತ್ ಮತ್ತು ಉರ್ಕುರಾ ನಡುವಿನ ನಾಲ್ಕನೇ ರೈಲು ಮಾರ್ಗ ನಿರ್ಮಾಣಕ್ಕೆ ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ.

***********

ಐದು ರಾಜ್ಯಗಳಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಿಗಾಗಿ ಪಶ್ಚಿಮಬಂಗಾಳ ರಾಜ್ಯ ಗೃಹ ಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ ಸೇರಿದಂತೆ ೧೫ ಐಎಎಸ್ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸುವ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಪಶ್ಚಿಮ ಬಂಗಾಳ ಸರ್ಕಾರ ಚುನಾವಣಾ ಆಯೋಗವನ್ನು ಕೋರಿದೆ. ಅಲ್ಲದೆ ಪಶ್ಚಿಮಬಂಗಾಳ ಸರ್ಕಾರ ೬ ಅಧಿಕಾರಿಗಳಿಗೆ ಪರ್ಯಾಯವಾಗಿ ಇತರರ ಹೆಸರುಗಳನ್ನು ಪ್ರಸ್ತಾಪಿಸಿದೆ ಎಂದು ಮೂಲಗಳು ತಿಳಿಸಿವೆ. ಚುನಾವಣೆಗಳಿಗಾಗಿ ಜಗದೀಶ್ ಪ್ರಸಾದ್ ಮೀನಾ ಮತ್ತು ಇಬ್ಬರು ಪೊಲೀಸ್ ಆಯುಕ್ತರು ಸೇರಿದಂತೆ ೧೫ ಐಎಎಸ್ ಮತ್ತು ೧೦ ಐಪಿಎಸ್ ಅಧಿಕಾರಿಗಳನ್ನು ಕೇಂದ್ರ ಚುನಾವಣಾ ವೀಕ್ಷಕರನ್ನಾಗಿ ಚುನಾವಣಾ ಆಯೋಗ ನೇಮಿಸಿದೆ.

***********

ವಡೋದರಾದ ಬಿಸಿಎ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಮಹಿಳಾ ಪ್ರೀಮಿಯರ್ ಲೀಗ್-ಡಬ್ಲೂಪಿಎಲ್ ಟಿ-೨೦ ಕ್ರಿಕೆಟ್‌ನ ೧೮ನೇ ಪಂದ್ಯದಲ್ಲಿ ಯುಪಿ ವಾರಿಯರ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ೮ ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಯುಪಿ ವಾರಿಯರ್ಸ್ ನಿಗದಿತ ೨೦ ಓವರ್‌ಗಳಿಗೆ ೮ ವಿಕೆಟ್ ನಷ್ಟಕ್ಕೆ ೧೪೩ ರನ್ ಗಳಿಸಿತು. ಆರ್‌ಸಿಬಿ ಪರ ಲೋರೆನ್ ಬೆಲ್ ಮೂರು ವಿಕೆಟ್ ಕಬಳಿಸಿದರು. ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ, ಕೇವಲ ೧೩.೧ ಓವರ್‌ಗಳಿಗೆ ೨ ವಿಕೆಟ್ ನಷ್ಟಕ್ಕೆ ೧೪೭ ರನ್ ಗಳಿಸಿ, ಗೆಲುವಿನ ನಗೆ ಬೀರಿತು. ಆರ್‌ಸಿಬಿ ಪರ ಗ್ರೇಸ್ ಹ್ಯಾರಿಸ್ ೭೫ ರನ್ ಹಾಗೂ ಸ್ಮೃತಿ ಮಂಧಾನ ೫೪ ರನ್‌ಗಳನ್ನು ಪೇರಿಸಿ, ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಗ್ರೇಸ್ ಹ್ಯಾರಿಸ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

***********

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಥೈಲ್ಯಾಂಡ್ ಮಾಸ್ಟರ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಇಶಾರಾಣಿ ಬರುವಾ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ನಿನ್ನೆ ನಡೆದ ಪಂದ್ಯದಲ್ಲಿ ಅವರು ದಕ್ಷಿಣ ಕೊರಿಯಾದ ಸುಂಗ್ ಶುವೊ ಯುನ್ ಅವರನ್ನು ೨೧-೧೩, ೧೪-೨೧ ಮತ್ತು ೨೧-೧೪ ಸೆಟ್‌ಗಳಿಂದ ಪರಾಭವಗೊಳಿಸಿದರು. ಇನ್ನೊಂದೆಡೆ ಮಹಿಳಾ

ಸಿಂಗಲ್ಸ್ ವಿಭಾಗದ ೧೬ನೇ ಸುತ್ತಿನ ಪಂದ್ಯದಲ್ಲಿ ಇಂಡೋನೇಷ್ಯಾದ ಪ್ರದೀಕ್ಷಾ ಬಾಗಸ್ ವಿರುದ್ಧ ೧೬-೨೧, ೧೧-೨೧ ಅಂತರದಿಂದ ಸೋತು ಭಾರತದ ಕಿರಣ್ ಜಾರ್ಜ್ ಪಂದ್ಯಾವಳಿಯಿಂದ ನಿರ್ಗಮಿಸಿದರು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ತೈಪೆಯ ಟಿಂಗ್ ಯೆನ್ ಚೆನ್ ಅವರನ್ನು ೨೧-೧೭, ೧೪-೨೧ ಮತ್ತು ೨೪-೨ ಸೆಟ್‌ಗಳಿಂದ ಮಣಿಸಿ, ಭಾರತದ ತರುಣ್ ಮನ್ನೇಪಲ್ಲಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟರು. ಇನ್ನೊಂದೆಡೆ ಪುರುಷರ ಸಿಂಗಲ್ಸ್ ವಿಭಾಗದ ೧೬ನೇ ಸುತ್ತಿನ ಪಂದ್ಯದಲ್ಲಿ ಮಲೇಷ್ಯಾದ ಲೀ ಝಿ ಜಿಯಾ ವಿರುದ್ಧ ೨೧-೧೧, ೧೬-೨೧ ಮತ್ತು ೧೨-೨೧ ಅಂತರದಿಂದ ಭಾರತದ ಮಿಥುನ್ ಮಂಜುನಾಥ್ ಪರಾಭವಗೊಂಡರು.

***********

ಭಾರತ ಮತ್ತು ಬಾಂಗ್ಲಾದೇಶ ೨೩ ಭಾರತೀಯ ಮೀನುಗಾರರು ಮತ್ತು ೧೨೮ ಬಾಂಗ್ಲಾದೇಶ ಮೀನುಗಾರರನ್ನು ಅವರ ಕಾರ್ಯಾಚರಣಾ ಹಡಗನ್ನು ಬಿಡುಗಡೆ ಮಾಡಿ, ಸ್ವದೇಶಕ್ಕೆ ವಾಪಸ್ ಕಳುಹಿಸುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿವೆ. ಅಂತಾರಾಷ್ಟ್ರೀಯ ಸಮುದ್ರ ಗಡಿ ರೇಖೆಯನ್ನು ಅಜಾಗರೂಕತೆಯಿಂದ ದಾಟಿದ ಭಾರತೀಯ ಮೀನುಗಾರರನ್ನು ಇತ್ತೀಚೆಗೆ ಬಾಂಗ್ಲಾದೇಶ ಅಧಿಕಾರಿಗಳು ಬಂಧಿಸಿದ್ದರು. ಭಾರತೀಯ ಮೀನುಗಾರರ ಸುರಕ್ಷತೆ, ಭದ್ರತೆ ಮತ್ತು ಕಲ್ಯಾಣಕ್ಕೆ ಸರ್ಕಾರ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

***********

೨೦೧೨ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತೀಯ ಪುರುಷರ ಹಾಕಿ ತಂಡಕ್ಕೆ ತರಬೇತುದಾರರಾಗಿದ್ದ ಆಸ್ಟ್ರೇಲಿಯಾದ ಮಾಜಿ ಹಾಕಿ ಆಟಗಾರ ಮೈಕೆಲ್ ನಾಬ್ಸ್ ದೀರ್ಘಕಾಲದ ಅನಾರೋಗ್ಯದಿಂದ ನಿನ್ನೆ ನಿಧನರಾಗಿದ್ದಾರೆ. ಅವರಿಗೆ ೭೨ ವರ್ಷ ವಯಸ್ಸಾಗಿತ್ತು. ೨೦೦೮ ರಲ್ಲಿ ಬೀಜಿಂಗ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯಲು ವಿಫಲವಾದ ನಂತರ ೨೦೧೧ ರಲ್ಲಿ ಭಾರತೀಯ ಪುರುಷರ ತಂಡದ ತರಬೇತುದಾರ ಸ್ಥಾನವನ್ನು ನಾಬ್ಸ್ ವಹಿಸಿಕೊಂಡರು. ಭಾರತದ ಜೊತೆಗೆ, ನಾಬ್ಸ್ ಜಪಾನ್‌ನಲ್ಲೂ ಸಹ ತರಬೇತುದಾರರಾಗಿದ್ದರು.

***********